ಮಾಧ್ಯಮದವರಿಗೂ ಸಾಹೇಬರಿಗೂ ಒಳ್ಳೆಯ ಕೊಂಡಿಯಾಗಿದ್ದರು. ಇಬ್ಬರ ನಡುವೆ ಉತ್ತಮ ಸಂಬಂಧ ಇರುವಂತೆ ನೋಡಿಕೊಳ್ಳುವುದು ಇವರಿಗೆ ಮೊದಲಿಂದಲೂ ಕರಗತವಾದ ಕೌಶಲ. ಅದರೊಂದಿಗೆ ಸಾಹೇಬರ ಎಲ್ಲ ಭಾಷಣಗಳನ್ನು ಬರೆದು ಕೊಡುವುದು, ಅದಕ್ಕೆ ಬೇಕಾದ ಅಂಕಿ ಅಂಶಗಳನ್ನು ಒಂದೆರಡು ದಿನಗಳ ಹಿಂದೆಯೇ ಸಂಗ್ರಹಿಸಿ, ಪೆನ್ನಿನಲ್ಲಿ ಗುರುತು ಹಾಕಿ ಸೂಕ್ಷ್ಮವಾದ ವಿಚಾರಗಳನ್ನು ಅವರಿಗೆ ತಿಳಿಸುವುದು ಅವರ ಇನ್ನಿತರ ಕೆಲಸ. ಈಗಿನ ಸಾಹೇಬರು 'ಕ್ಲೀನ್ ಹ್ಯಾಂಡ್' ಅಂತ ಹೆಸರುಪಡೆದಿದ್ದರು. ಸಾಹೇಬರು ವಿದ್ಯಾವಂತರು, ಎಲ್‌ಎಲ್‌ಬಿ ಓದಿದವರಷ್ಟೇ ಅಲ್ಲ, ಭಾರತದ ಸಂವಿಧಾನದ ಪ್ರತಿ ಆರ್ಟಿಕಲ್ ಅವರ ನೆನಪಿನಲ್ಲಿತ್ತು. ಜೊತೆಗೆ ಕಲೆ, ಸಾಹಿತ್ಯದಲ್ಲೂ ರುಚಿ ಇಟ್ಟುಕೊಂಡಿದ್ದು, ಬಿಡುವು ಸಿಕ್ಕಾಗಲೆಲ್ಲ ಪುಸ್ತಕಗಳ ಕುರಿತು ಚರ್ಚಿಸುತ್ತಿದ್ದರು. ಸದಾ ಹಸನ್ಮುಖಿ. ಮಾತಿನ ಆರಂಭ ಮತ್ತು ಅಂತ್ಯದಲ್ಲಿ ಅವರ ಟ್ರೇಡ್‌ಮಾರ್ಕ್ ನಗು ಹಹಹಹ ಹ್ ಇರುತಿತ್ತು. ವೆಂಕಟ್ ಅವರಿಗೆ ಒಂದು ವಾರದಲ್ಲೇ ಸಹಜವಾಗಿಯೇ ಸಾಹೇಬರು ಬೇರೆಲ್ಲರಿಗಿಂತ ಭಿನ್ನರಾಗಿ, ಪ್ರಬುದ್ಧರಾಗಿ, ಯೋಗ್ಯರಾಗಿ ಕಂಡಿದ್ದರು.

ಸಾಹೇಬರ ಮನೆ ತಲುಪಿದಾಗ, ಯಜಮಾನರು ತಮ್ಮ ಟೀಪಾಯಿಯ ಮೇಲೆ ಹಲವಾರು ವಾಚುಗಳನ್ನು ಹರಡಿಕೊಂಡು ಕೂತಿದ್ದರು. ಮಾಮೂಲಿನಂತೆ ವರದಿಯನ್ನು ಒಪ್ಪಿಸಿ, ದಿನದ ಸಮಾರಂಭಗಳಲ್ಲಿ ನೀಡಬೇಕಾದ ಭಾಷಣಗಳ ಪ್ರತಿ ಹಾಗೂ ಕೆಂಪು, ಹಳದಿ ಬಣ್ಣದಲ್ಲಿ ಗುರುತು ಮಾಡಿದ ಮುಖ್ಯ ಅಂಶಗಳನ್ನು ಸಾಹೇಬರಿಗೆ ತೋರಿಸಿ, ಅವರ ಸಲಹೆಯಂತೆ ಒಂದೆರಡು ತಿದ್ದುಪಡಿ ಮಾಡುವುದರಲ್ಲಿ ಮಗ್ನರಾಗಿದ್ದರು. ಆಗ ಸಾಹೇಬರು ತಮ್ಮ ಎಂದಿನ ಟ್ರೇಡ್‌ಮಾರ್ಕ್ ನಗೆಯ ಬಂಡಿಯನ್ನು ಬಿಡುತ್ತ ಹ ಹಹಹಹ ಹ್, "ರೀ ವೆಂಕಟ್, ಈ ವಾಚ್ ನೋಡಿ ಎಷ್ಟು ಚೆನ್ನಾಗಿದೆ" ಎಂದರು. ಆಸಕ್ತಿ ಇಲ್ಲದಿದ್ದರೂ "ಹೌದು ಸರ್ ಚೆನ್ನಾಗಿದೆ" ಎಂದುತ್ತರಿಸಿದರು.

"ಸರಿ, ನಿಮಗಿಷ್ಟ ಆಗಿದ್ದರೆ ಇದನ್ನ ನೀವು ತೊಗೊಳ್ಳಿ" ಎಂದರು.

ಅದಕ್ಕೆ ರಾಯರು, "ಬೇಸರ ಮಾಡಿಕೊಳ್ಳಬೇಡಿ, ನೀವು ವಿಶ್ವಾಸದಿಂದ ಕೊಡುತ್ತಿರೋದನ್ನ ಬೇಡ ಅನ್ನೋದಕ್ಕೆ ಮನಸ್ಸು ಬರುತ್ತಿಲ್ಲ, ಆದರೆ ನನಗೆ ವಾಚ್ ಬೇಡ, ಸರ್" ಎಂದರು.

"ಹಹಹ ಹ್, ಸರಿ ಹೋಗ್ಲಿ ಬಿಡ್ರಿ, ಯಾಕೆ ಬಲವಂತ ಮಾಡೋದು. ನನಗೆ ಅದೇನೋ ಈ ಡಯಲ್ ಇರೋ ವಾಚು ಅಂದ್ರೆ ಏನೋ ಒಂದು ಆಕರ್ಷಣೆ. ನೋಡಿ ಇದನ್ನ, ನೋಡುತ್ತಿದ್ದರೆ ಇದು ಸದಾ ನನ್ನ ಮೇಲೆ ಒಂದು ಕಣ್ಣಿಟ್ಟಿದೆ ಅನ್ನಿಸುತ್ತೆ. ನನ್ನ ಪ್ರತಿ ಹೆಜ್ಜೆಯನ್ನು ಗಮನಿಸುತ್ತಿದೆ, ನಾನು ನನ್ನ ಸಮಯವನ್ನ ಸರಿಯಾಗಿ ಉಪಯೋಗಿಸಿಕೊಂಡಿದ್ದಿನೋ ಇಲ್ಲವೋ ಎಂದು ನನಗೆ ನೆನಪಿಸುತ್ತೆ. ನನ್ನಂತೆ ನೀನು ಸದಾ ಓಡುತ್ತಿರಬೇಕು, ನಿಂತರೆ ನೀ ಕೆಟ್ಟೆ ಎಂದು ಎಚ್ಚರಿಸುತ್ತೆ. ಎಷ್ಟೋ ಸಾರಿ ಇದನ್ನ ನಿಲ್ಲಿಸಿದ್ದೀನಿ, ನಾನು ನಿನ್ನ ಕೈ ಗೊಂಬೆಯಲ್ಲ ಎಂದು ನೋಡಿ ನಕ್ಕಿದ್ದೀನಿ. ಮರುಕ್ಷಣ ಅಯ್ಯೋ ಮೂಢ, ನೀನು ನಿಲ್ಲಿಸಿದ್ದು ಯಂತ್ರವನ್ನೇ ಹೊರತು ಕಾಲವನಲ್ಲ ಎಂದು ನನ್ನನು ನೋಡಿ ನಗುತ್ತಿದೆಯೇನೋ ಎಂದು ಭಾಸವಾಗುತ್ತೆ. ವೃತ್ತದ ಒಳಗೆ ಬದುಕು ಮತ್ತೆ ಒಂದು ಎರಡು ಮೂರು ಸುತ್ತು ಸುತ್ತಿ ಬರುತ್ತದೆ. ಕಾಲ ಒಂದು ಚಕ್ರದಂತೆ, ಅದರಿಂದ ಸುಲಭದಲ್ಲಿ ತಪ್ಪಿಸಿಕೊಳ್ಳಲಾರೆ, ಸ್ವಲ್ಪ ವಿನಯದಿಂದಿರು ಎಂದು ಪಾಠ ಹೇಳುತ್ತೆ ಅನ್ನಿಸುತ್ತೆ. ನೋಡಿ, ಗಂಟೆಗೆ ಅರವತ್ತು ನಿಮಿಷ, ನಿಮಿಷಕ್ಕೆ ಅರವತ್ತು ಸೆಕೆಂಡ್. ಆದರೆ, ಗಂಟೆ ತಾನು ಇವರಿಬ್ಬರಿಗಿಂತ ದೊಡ್ಡವ ಎಂದು ಬಿಗುವ ಹಾಗಿಲ್ಲ. ಸೆಕೆಂಡಿನ ಮುಳ್ಳು ನಿಂತರೆ ಮೇಲಿನಿಬ್ಬರಿಗೂ ಭವಿಷ್ಯವಿಲ್ಲ. ಅದಕ್ಕೆ ಪ್ರತಿ ಸೆಕೆಂಡಿಗೆ ಬೆಲೆ ಕೊಡಬೇಕು. ಮತ್ತೆ ಈ ಸೆಕೆಂಡ್ ಮುಳ್ಳು ಬೇರೆ ಎರಡರದಕ್ಕಿಂತ ಉದ್ದವಾಗಿರುವುದು ಅದಕ್ಕೇ ಇರಬೇಕು. ನಾವು ಅಷ್ಟು ಅಮೂಲ್ಯವಾದ ಕ್ಷಣಗಳನ್ನ ಹೇಗೆ ಹೇಗೋ ಕಳೆದುಬಿಡುತ್ತೀವಿ. ಈಗ ಬಿಡಿ, ಡಿಜಿಟಲ್ ವಾಚು ಏನೇನೋ ಬಂದಿದೆ. ಬಿಪಿ, ಶುಗರ್ ಎಲ್ಲ ಚೆಕ್ ಮಾಡಿ ಹೇಳ್ಬಿಡುತ್ತೆ. ಆದರೂ ಮೆಕ್ಯಾನಿಕಲ್ ವಾಚು